ನಿವೃತ್ತಿ, ಅಕಾಲಿಕ ಮರಣ ಇತ್ಯಾದಿ ಕಾರಣಗಳಿಂದ ತೆರವಾಗುವ ಹುದ್ದೆಗಳನ್ನು ಅನುದಾನರಹಿತ ಹುದ್ದೆಗಳೆಂದು ಪರಿಗಣಿಸುತ್ತಿರುವುದು

2611(3148) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ಅಕಾಲಿಕ ಮರಣ ಇತ್ಯಾದಿ ಕಾರಣಗಳಿಂದ ತೆರವಾಗುವ ಹುದ್ದೆಗಳನ್ನು ಅನುದಾನ ರಹಿತ ಹುದ್ದೆಗಳೆಂದು ಪರಿಗಣಿಸಲು ಸರ್ಕಾರ ತೀರ್ಮಾನಿಸಿದೆಯೆ;

ಆ) ಈ ಬಗ್ಗೆ ವಿರೋಧವಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಇ) ಈ ಹುದ್ದೆಗಳನ್ನು ಅನುದಾನ ಸಹಿತ ಹುದ್ದೆಗಳಾಗೇ ಇರುವಂತೆ ಬಿಡಲು ಸರ್ಕಾರದ ತೀರ್ಮಾನವೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಹೌದು

ಆ) ಬಂದಿದೆ

ಇ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಮಲೇರಿಯಾ ರೋಗ ನಿಯಂತ್ರಣ

2612(2969) ಸಿಂಧ್ಯ ಪಿ.ಜಿ.ಆರ್ (ಕನಕಪುರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಮಲೇರಿಯಾ ರೋಗವು ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ರೋಗವು ಯಾವ ಯಾವ ತಾಲ್ಲೂಕುಗಳಲ್ಲಿ ಇದುವರೆಗೆ ಹರಡಿದೆ;

ಇ) ಮಲೇರಿಯಾ ರೋಗದಿಂದ, ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಸತ್ತವರ ಸಂಖ್ಯೆ ಎಷ್ಟು;

ಈ) ಈ ರೋಗವನ್ನು ತಡೆಗಟ್ಟಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉ) ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಸಹಾಯಕ್ಕೇನಾದರೂ ಬಂದಿದೆಯೆ? (ವಿವರ ಒದಗಿಸುವುದು)

ಡಾ: ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):—

ಅ) ಈ ಕೆಳಕಂಡ 24 ತಾಲ್ಲೂಕುಗಳಲ್ಲಿ ಮಲೇರಿಯಾ ರೋಗ ಹೆಚ್ಚಾಗಿರುವುದು ಕಂಡುಬಂದಿದೆ.

ಮುಳಬಾಗಿಲು, ಬಾಗೇಪಲ್ಲಿ, ಗುಡಿಬಂಡೆ, ಹಿರಿಯೂರು, ಹೊಸದುರ್ಗ, ಚಿಕ್ಕನಾಯಕನಹಳ್ಳಿ, ಶಿರಾ, ಗೋಕಾಕ್, ಮುದ್ದೇಬಿಹಾಳ್, ಶೋರಾಪುರ, ಲಿಂಗಸಗೂರು, ದೇವದುರ್ಗ, ಕೆ.ಆರ್.ನಗರ, ಮಂಡ್ಯ, ಪಾಂಡವಪುರ, ಕೆ.ಆರ್.ಪೇಟೆ ಅರಸೀಕೆರೆ, ಕಡೂರು, ಬಾದಾಮಿ, ಹುನಗುಂದ, ಕುಷ್ಟಗಿ, ಯಲಬುರ್ಗ, ಉಡುಪಿ ಮತ್ತು ಕಾರ್ಕಳ.

ಆ) 1999 : 11
2000 : 14
2001 (ಇಲ್ಲಿಯವರೆಗೆ) : 7

ರಾಜ್ಯದಲ್ಲಿ ಮಲೇರಿಯ ರೋಗ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

1) ರಾಜ್ಯದಲ್ಲಿ 115 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರದೇಶಗಳನ್ನು "ಸಮಸ್ಯಾತ್ಮಕ" ಎಂದು ಗುರುತಿಸಲಾಗಿದೆ
2) ಜ್ವರ ನಿವಾರಣೆ, ರೋಗ ಪತ್ತೆ ಹಾಗೂ ತ್ವರಿತ ಚಿಕಿತ್ಸಾ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.
3) ಸಮಸ್ಯಾತ್ಮಕ ಪ್ರದೇಶಗಳಲ್ಲಿ ಜ್ವರ ತೀವ್ರ ಚಿಕಿತ್ಸೆ ಮತ್ತು ತೀವ್ರ ಜ್ವರ ಸಮೀಕ್ಷಣಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ.
4) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗಾಲಯ ವ್ಯವಸ್ಥೆ ಮಾಡಲಾಗಿದ್ದು ಇದಕ್ಕಾಗಿ 378 ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ.
5) ಎಲ್ಲಾ ಖಚಿತ ಮಲೇರಿಯ ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ ಹಾಗೂ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಆದ್ಯತೆ ಮೇರೆಗೆ ಪರಿಷ್ಕೃತ ವಿಧಾನದಲ್ಲಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

6) ರೋಗ ವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ಆಯ್ದ ಪ್ರದೇಶಗಳಲ್ಲಿ ನಿಯಮಿತವಾಗಿ ಕೀಟನಾಶಕ ಸಿಂಪರಣಾ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

7) ದೂರದ ಗ್ರಾಮಾಂತರ ಪ್ರದೇಶಗಳಲ್ಲಿ ಜ್ವರ ಪೀಡಿತರಿಗೆ ತುರ್ತಾಗಿ ಚಿಕಿತ್ಸೆ ಅನುಕೂಲವಾಗುವಂತೆ ಔಷಧಿ ವಿತರಣಾ ಕೇಂದ್ರಗಳು ಮತ್ತು ಜ್ವರ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

8) ಸೂಕ್ತ ಪ್ರದೇಶಗಳಲ್ಲಿ ರೋಗ ವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಲು ಜೈವಿಕ ಪರಿಸರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

9) ಇಲಾಖೆಯ ಹಿರಿಯ ಅಧಿಕಾರಿಗಳು ಎಲ್ಲಾ ಸಂಮಸ್ಯಾತ್ಮಕ ಪ್ರದೇಶಗಳಿಗೆ ಖುದ್ದಾಗಿ ಆಗಾಗ್ಗೆ ಭೇಟಿ ನೀಡಿ ಕಣ್ಗಾವಲು ನಡೆಸಿ, ಪ್ರಯೋಗಶಾಲಾ ಪರೀಕ್ಷೆಗಳನ್ನು ತೀವ್ರತರವಾಗಿ ತಪಾಸಣೆ ನಡೆಸಿ ಸತತವಾಗಿ ವಿಶೇಷ ಗಮನಹರಿಸಿ ಉಸ್ತುವಾರಿ ನಡೆಸುತ್ತಿದ್ದಾರೆ.

10) ಮಲೇರಿಯ ನಿಯಂತ್ರಣದ ಬಗ್ಗೆ ಜನಜಾಗೃತಿ ಮೂಡಿಸಲು ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದ್ದು ಪ್ರತಿವರ್ಷ ಜೂನ್ ತಿಂಗಳಲ್ಲಿ ಮಲೇರಿಯ ಮಾಸಾಚರಣೆಯನ್ನು ರಾಜ್ಯಾದ್ಯಂತ ಆಚರಿಸಲಾಗುತ್ತಿದೆ.

ಊ) ಕೇಂದ್ರ ಸರ್ಕಾರವು ಮಲೇರಿಯಾ ವಿರೋಧ ಕಾರ್ಯಕ್ರಮದಡಿಯಲ್ಲಿ (ಗ್ರಾಮಾಂತರ ಮತ್ತು ನಗರ) ನಗದು ರೂಪದಲ್ಲಿ ಈ ಕೆಳಕಂಡ ಸಾಮಗ್ರಿಗಳನ್ನು ಪ್ರತಿವರ್ಷವೂ ಒದಗಿಸುತ್ತಿದೆ.

1) ಡಿ.ಡಿಟಿ. ಮತ್ತು ಮೆಲಾಥಿಯಾನ್ ಕೀಟನಾಶಕಗಳು

2) ಮಲೇರಿಯಾ ನಿರೋಧಕ ಗುಳಿಗೆಗಳು ಮತ್ತೆ ಚಿಕಿತ್ಸೆ ಮದ್ದುಗಳು

3) ಕೀಟನಾಶಕ ದ್ರಾವಣಗಳು (Larvicides)

2001-02ನೇ ಸಾಲಿನಲ್ಲಿ ಈ ಕೆಳಕಂಡ ಸಾಮಗ್ರಿಗಳನ್ನು ಕೇಂದ್ರ ಸರ್ಕಾರವು ಸರಬರಾಜು ಮಾಡಿದೆ.

ಅ) ಡಿ.ಡಿಟಿ. 25ಶೇ. ಕೀಟನಾಶಕ - 110 ಮೆಟ್ರಿಕ್ ಟನ್

ಆ) ಕ್ಲೋರೋಕ್ವಿನ್ ಗುಳಿಗೆಗಳು - 300 ಲಕ್ಷಗಳು

ಇ) ಪ್ರೈಮಾಕ್ವಿನ್ 7.5 ಎಂ.ಜಿ - 16 ಲಕ್ಷಗಳು

ಈ) ಸಲ್ಫಾಡಾಕ್ಸಿನ್/ಪೈರೀಮಿಥಾಮಿನ್ - 50,000 ಗುಳಿಗೆಗಳು

ಉ) ಕ್ವಿನೈನ್ ಚುಚ್ಚುಮದ್ದು - 3,000 ಆಂಪ್ಯೂಲ್‌ಗಳು